INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -6, March-April, 2022,
PageNo,01-07
Peer Reviewed Journal, Referred Journal

# ಹಾಸನ ಜಿಲ್ಲೆಯಲ್ಲಿ ಹೊಯ್ಸಳ ವಿಷ್ಣುವರ್ಧನನ ಕಾಲದ ವೈಷ್ಣವ ದೇವಾಲಯಗಳು

ತಿಪ್ಪೇಸ್ವಾಮಿ. ಡಿ. ಹೆಚ್.[1]
ಡಾ.ಎಂ.ವಿ.ರಮೇಶ್[2]

ಹೊಯ್ಸಳ ವಿಷ್ಣುವರ್ಧನನ ಕಾಲ ಕ್ರಿ.ಶ.1108 ರಿಂದ 1152. ಈತನು ಒಂದನೇ ಬಲ್ಲಾಳನ ಅನಂತರ ಸಿಂಹಾಸನವನ್ನು ಏರಿದನು. ಈತನ ಮೂಲ ಹೆಸರು ಬಿಟ್ಟಿದೇವ. ತದನಂತರ ವಿಷ್ಣುವರ್ಧನನಾದನು. ವಿಷ್ಣುವರ್ಧನನು ಹೊಯ್ಸಳರ ರಾಜರಲ್ಲಿಯೇ ಅತ್ಯಂತ ಪ್ರಮುಖ ಮತ್ತು ಪ್ರಖ್ಯಾತ ರಾಜ. ವರ್ಣರಂಜಿತ ವ್ಯಕ್ತಿಯೆನಿಸಿಕೊಂಡಿದ್ದಾನೆ. ಈತನನ್ನು ತ್ರಿಭುವನಮಲ್ಲ, ಪಂಚಮಹಾಶಬ್ದ, ಮಹಾಮಂಡಲೇಶ್ವರ, ದ್ವಾರಾವತಿ ಪುರಾವಧೀಶ್ವರ, ಯಾದವ ಕುಲತಿಲಕ, ಸರ್ವಜ್ಞ ಚೂಡಾಮಣಿ, ಭುಜಬಲ ವೀರ, ಗಂಗ, ತಲಕಾಡುಕೊಂಡ, ನೊಳಂಬವಾಡಿಕೊಂಡ, ಉಚ್ಚಂಗಿಕೊಂಡ ಇನ್ನೂ ಮೊದಲಾದಂತಹ ಬಿರುದುಗಳು ಈ ರಾಜನಿಗೆ ಇದ್ದವು. ಬಿಟ್ಟಿದೇವನ ಮೊದಲ ಶಾಸನವು ಕ್ರಿ.ಶ.1104ರಲ್ಲಿ ಪ್ರಕಟವಾಗಿರುವುದರಿಂದ ಅವನು ಅದೇ ವರ್ಷ ಅಥವಾ ಅದರ ಹಿಂದಿನ ವರ್ಷವೇ ಅರಸನಾದವನೆಂದು ತಿಳಿಯಬಹುದಾಗಿದೆ.[1] ಮುಂದುವರೆದಂತೆ, ಹಾಸನ ಜಿಲ್ಲೆಯ ಬೇಲೂರಿನಲ್ಲಿ ದೊರೆತಿರುವಂತಹ ಶಾಸನವು ವಿಷ್ಣುವರ್ಧನನ ದಿಗ್ವಿಜಯದ ವಿಚಾರಗಳನ್ನು ಸವಿಸ್ತಾರವಾಗಿಯೇ ತಿಳಿಸುತ್ತದೆ.[2]

ಹೊಯ್ಸರ ಪ್ರಖ್ಯಾತ ಅರಸನಾಗಿದ್ದಂತಹ ವಿಷ್ಣುವರ್ಧನನು ಅಧಿಕಾರಕ್ಕೆ ಬಂದಾಗ 18 ವರ್ಷಗಳ ಯುವಕನಾಗಿದ್ದನು. ಈತನು ಚಿಕ್ಕವನಿರುವಾಗಲೇ ತನ್ನ ಅಣ್ಣ ನೊಡನೆ ಸೇರಿ ಅನೇಕ ದಿಗ್ವಿಜಯಗಳಲ್ಲಿ ಭಾಗವಹಿಸಿ ಅನುಭವಶಾಲಿಯಾಗಿದ್ದನು. ಈತನು ಮೊದಲಿಗೆ ಜೈನನಾಗಿದ್ದು, ತದನಂತರ ವೈಷ್ಣವ ಧರ್ಮದ ಪ್ರಭಾವದಿಂದಾಗಿಯೇ ಅದನ್ನು ಅವಲಂಬಿಸಿದನೆಂದೂ ಹಲವು ಹತ್ತು ರೀತಿಯಲ್ಲಿನ ದಂತಕಥೆಗಳಿವೆ. ಈತನ ಮಗಳಿಗೆ ಪಿಶಾಚಿ ಹಿಡಿದಿರಲು ಅಂದು ವೈಷ್ಣವ ಪಂಥದ

---

1. **ಸಂಶೋಧಕರು**, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

2 .**ಸಹಾಯಕ ಪ್ರಾಧ್ಯಾಪಕರು**, ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

ಪ್ರತಿಪಾದರಾಗಿದ್ದಂತಹ ರಾಮಾನುಜಾಚಾರ್ಯರು ಅದನ್ನು ಓಡಿಸಿದನು. ಅನಂತರದಲ್ಲಿ ಈ ವಿಷ್ಣುವರ್ಧನನ್ನು ವೈಷ್ಣವನನ್ನಾಗಿ ಮಾಡಿದರೆಂದು ಇತಿಹಾಸ ಪುಟಗಳಿಂದ ತಿಳಿದುಬರುತ್ತದೆ. ಇದೇ ಅಲ್ಲದೇ ವೈಷ್ಣವ ಪಂಥಕ್ಕೆ ಪರಿವರ್ತನಾದುದರಿಂದ ಸ್ಮಾರಕವಾಗಿ ಹಲವು ಹತ್ತು ಕಡೆಗಳಲ್ಲಿ ಈ ವೈಷ್ಣವ ದೇವಾಲಯಗಳನ್ನು ನಿರ್ಮಿಸಿದ್ದನು[3] ಎಂಬುದನ್ನು ಗುರಿತಿಸಬಹುದು.

ಹೊಯ್ಸಳರ ಶಿಲ್ಪಕಲೆಯು ಕಲಾ ಪ್ರಪಂಚದಲ್ಲೇ ಜಗದ್ವಿಖ್ಯಾತವಾಗಿದೆ. ಹೊಯ್ಸಳರ ಶಿಲ್ಪ ಶೈಲಿಯು ಉನ್ನತಾವಸ್ಥೆಗೇರಿದ್ದು, ಹೊಯ್ಸಳರ ಆಡಳಿತದ ಕಾಲಕ್ಕೆ ಅಂದರೆ ಕ್ರಿ.ಶ.11–12ನೇ ಶತಮಾನದಲ್ಲಿ ರಚಿತವಾಗಿರುವ ಬಹುತೇಕ ದೇವಾಲಯಗಳೂ ನಿರಾಲಂಕಾರವಾಗಿ ರಚಿಸುತ್ತಿದ್ದ ದೇವಾಲಯಗಳ ಬಸದಿಗಳು ಸುಂದರ ವಾಸ್ತುಗಳಾಗಿ ರೂಪುಗೊಂಡಿರುವುದನ್ನು ಗಮನಿಸಿದ್ದೇವೆ.

ಕ್ರಿ.ಶ.12–13ನೇ ಶತಮಾನದ ದೇವಾಲಯಗಳು ಹಾಗೂ ಬಸದಿಗಳು ಅಧಿಷ್ಠಾನ, ಭಿತ್ತಿ, ಶಿಖರ, ದ್ವಾರಬಂಧ ಕಂಬಗಳು ವಿತಾನ ಮುಂತಾದ ಎಲ್ಲಾ ಭಾಗಗಳು ಸೂಕ್ಷ್ಮವಾದ ಕುಸುರಿ ಕೆತ್ತನೆಯಿಂದ ಕೂಡಿರುತ್ತದೆ. ಹೊಯ್ಸಳರ ವಾಸ್ತುಶಿಲ್ಪ ಶೈಲಿಯೂ ಭಾರತೀಯ ಕಲಾ ಪರಂಪರೆಯಲ್ಲಿ ಪ್ರಮುಖ ಸ್ಥಾನವನು ಪಡೆದಿದೆ. ಹೊಯ್ಸಳರ ಕಲಾ ಶೈಲಿ ಕರ್ನಾಟಕದಲ್ಲಿ ಹೆಚ್ಚು ಜನಾನುರಾಗಿಯಾಗಿರುವ ಶೈಲಿ, ಈ ಶೈಲಿಯ ದೇವಾಲಯಗಳನ್ನು ನೋಡಿಲ್ಲದವರು ಕರ್ನಾಟಕದಲ್ಲಿ ಬಹುಶಃ ತುಂಬಾನೆ ಕಡಿಮೆ ನೋಡಿದವರೆಲ್ಲರೂ ಈ ಶೈಲಿಯ ಕಲಾಕೃತಿಗಳನ್ನು ತುಂಬಾನೆ ಮೆಚ್ಚಿಕೊಂಡಿದ್ದಾರೆ. ಸಾಕಷ್ಟು ವಿದ್ವಾಂಸರು ಇವರ ಕಾಲದ ದೇವಾಲಯಗಳನ್ನು ಪ್ರಶಂಸಿಸಿದ್ದಾರೆ.

ಕರ್ನಾಟಕ ಅಲ್ಲದೆ ದೇಶ ವಿದೇಶದ ಬಹುತೇಕ ವಿದ್ವಾಂಸರು ಮತ್ತು ಸಂಶೋಧಕರು ಈ ಹೊಯ್ಸಳರ ಕಲಾ ಶೈಲಿಯ ವಿವಿಧ ಅಂಶಗಳನ್ನು ವಿವಿಧ ಮುಖಗಳನ್ನು ಆಯ್ದುಕೊಂಡು ಸಂಶೋಧನೆ ನಡೆಸಿದ್ದಾರೆ. ಹಲವು ಹತ್ತು ಕೃತಿಗಳು, ಮತ್ತು ಲೇಖನಗಳು ಬಂದಿವೆ. ಹೊಯ್ಸಳರ ವಾಸ್ತುಶಿಲ್ಪ ಶೈಲಿಯನ್ನು ಅದರ ಲಕ್ಷಣಗಳನ್ನು ಅದರ ವಿವರಗಳನ್ನು ಕುರಿತು ಪ್ರಕಟವಾದ ಹೊಯ್ಸಳರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯನ್ನು ಕುರಿತು ಹೊಸ ಹೊಸ ಸಂಶೋಧನೆಗಳು ಇನ್ನೂ ಕೂಡ ನಡೆಯುತ್ತಿವೆ. ಹೊಯ್ಸಳರು ಬಳಪದ ಕಲ್ಲಿನಲ್ಲಿ ನಿರ್ಮಿಸಿದ ಅತ್ಯಾಲಂಕೃತ ದೇವಾಲಯಗಳೆಲ್ಲವನ್ನು ವೇಸರ ಶೈಲಿಯ ದೇವಾಲಯಗಳೆಂದು ಪರಿಗಣಿಸುವ ತಪ್ಪುಕಲ್ಪನೆ ನಮ್ಮಲ್ಲಿದೆ. ಹೊಯ್ಸಳರು ನಿರ್ಮಿಸಿದ ಬಳಪದ ಕಲ್ಲಿನ ಅಲಂಕೃತ ದೇವಾಲಯಗಳೆಲ್ಲವೂ ವೇಸರ ಶೈಲಿಯ ದೇವಾಲಯಗಳಲ್ಲ. ವೇಸರ ಶೈಲಿಯ ದೇವಾಲಯವಾಗಬೇಕಾದರೆ ಅದು ನಾಗರ, ದ್ರಾವಿಡ ಶೈಲಿ ಲಕ್ಷಣಗಳಿಂದ ಕೂಡಿರುವ ವಿಮಾನವನ್ನು ಹೊಂದಿರಬೇಕು. ಜೊತೆಗೆ ಗರ್ಭಗೃಹ ಭಾಗವು ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿರಬೇಕು. ನಕ್ಷತ್ರಾಕಾರದ ತಳ ವಿನ್ಯಾಸದಲ್ಲಿ ಆ ವಿಮಾನಕ್ಕೆ ಅರ್ಧವೃತ್ತಾಕಾರದ ವಲಯ ಉಂಟಾಗುತ್ತದೆ. ಈ ನಕ್ಷತ್ರಾಕಾರದ ತಳವಿನ್ಯಾಸ ಹೊಯ್ಸಳರು ನಿರ್ಮಿಸಿದ ಎಲ್ಲಾ ದೇವಾಲಯಗಳಲ್ಲಿ ಕಾಣಬರುವುದಿಲ್ಲ.

ಆದ್ದರಿಂದ ಹೊಯ್ಸಳರ ಎಲ್ಲಾ ದೇವಾಲಯಗಳೂ ವೇಸರ ದೇವಾಲಯಗಳಾಗುವುದಿಲ್ಲ. ಹೊಯ್ಸಳರು ತಮ್ಮ ಶೈಲಿಯಲ್ಲಿ ಅನೇಕ ಬದಲಾವಣೆಗಳನ್ನು ವಾಸ್ತು ಆವಿಷ್ಕಾರಗಳನ್ನು ಅಳವಡಿಸಿಕೊಂಡರು. ಜೊತೆಗೆ ಈ ಕಾಲಕ್ಕೆ ಪ್ರಚಲಿತವಿದ್ದ ದ್ರಾವಿಡ ವಾಸ್ತುಶೈಲಿಯನ್ನು ಬಳಸಿಕೊಂಡರು. ಹೊಯ್ಸಳ ಶೈಲಿಯಲ್ಲಿ ಕಾಣುವ ವಿನೂತನವಾದ ಬದಲಾವಣೆಗಳು ಹೊಯ್ಸಳ ದೇವಾಲಗಳಲ್ಲಿ ಕಂಡುಬರುತ್ತದೆ. ತಳವಿನ್ಯಾಸ, ಮಾಧ್ಯಮ ಅಲಂಕರಣೆ, ಅಧಿಷ್ಠಾನದ ವಿನ್ಯಾಸ ಭಿತ್ತಿಯ ಅಲಂಕರಣೆ ಹಾಗೂ ಇತರೆ ಭಾಗದ ಅಲಂಕರಣೆಗಳು ಕಂಡುಬರುತ್ತದೆ.

ಹೊಯ್ಸಳ ನಾಡಿನಲ್ಲಿ ಶ್ರೀವೈಷ್ಣವ ಧರ್ಮದ ಆಚಾರ್ಯರಾದ ಶ್ರೀರಾಮಾನುಜಾಚಾರ್ಯರು ಕೆಲವು ಕಾಲ ನೆಲೆಸಿದ್ದರು. ಆದ ಕಾರಣ ಆಚಾರ್ಯರ ಆದೇಶದಂತೆ ಶ್ರೀವೈಷ್ಣವ ದೇವಾಲಯಗಳಲ್ಲಿ ಪಂಚರಾತ್ರಾಗಮದ ಪ್ರಕಾರ ಪೂಜಾ ಉತ್ಸವಗಳು ನಡೆಯ ತೊಡಗಿದವು. ಆ ರಾಮಾನುಜಾಚಾರ್ಯರ ಪ್ರಭಾವದಿಂದ ಹೊಯ್ಸಳರ ನಾಡಿನಲ್ಲಿ ಹಲವು ಹತ್ತು ವೈಷ್ಣವ ದೇವಾಲಯಗಳು ನಿರ್ಮಾಣವಾಗಿದೆ. ಅವುಗಳಲ್ಲಿ ವಿಜಯನಾರಾಯಣ ಮತ್ತು ಜನಾರ್ಧನ ದೇವಾಲಯವನ್ನು ಸ್ವತಃ ವಿಷ್ಣುವರ್ಧನನೇ ನಿರ್ಮಿಸಿ ದಾನದತ್ತಿಯನ್ನು ನೀಡಿದ್ದಾರೆ. ಇನ್ನುಳಿದ ಮೂರು ದೇವಾಲಯಗಳಲ್ಲಿ ನಾರಾಯಣ ದೇವಾಲಯವನ್ನು ಕೇಶವ ದೇವಾಲಯವನ್ನು ಕೊನೆಯ ಶಂಕರದಂಡನಾಥರು ವಿಷ್ಣು ದೇವಾಲಯವನ್ನು ನಾರಾಯಣ ದೇವರು ನಿರ್ಮಿಸಿದ ವಿಚಾರ ತಿಳಿದುಬರುತ್ತದೆ.[4] ಕ್ರಿ.ಶ.1117ರ ಬೇಲೂರು ಶಾಸನವು ತಿಳಿಸಿರುವಂತೆ ವಿಷ್ಣುವರ್ಧನನು ವಿಜಯ ನಾರಾಯಣ ದೇವರ ಪ್ರತಿಷ್ಠೆ ಮಾಡಿಸಿ ವಿಜಯ ನಾರಾಯಣ ಚನ್ನಕೇಶವ, ಲಕ್ಷ್ಮೀನಾರಾಯಣ ದೇವರ ನಿತ್ಯ ನೈಮಿತ್ತಿಕ ದಿವ್ಯಾಂಗ ಪೂಜೆ ಶ್ರೀವೈಷ್ಣವ ಬ್ರಾಹ್ಮಣ ನಿರ್ವಹಣೆ ಕಲಾವಿದರು, ಪಂಡಿತರು, ಹೂಗಾರರು ಹಾಗೂ ದೇವಾಲಯ ಕೆಲಸಗಾರರಿಗೆ ವೇಲಾಪುರ ಬೀಡಿನ ಹಲವು ಭಾಗ ಮತ್ತು ಅಲ್ಲಿನ ಸುಂಕದಿಂದ ಬರುವ ಆದಾಯದ ಹಣವನ್ನು ದಾನವಾಗಿ ನೀಡುತ್ತಾನೆ. ಜೊತೆಗೆ ದೇವಾಲಯಕ್ಕೆ ಬರುವ ಭಕ್ತರು ಸಲ್ಲಿಸುವ ಕಾಣಿಕೆಯ ಹಣದಿಂದ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಬಳಸಲು ದಾನ ನೀಡುತ್ತಾರೆ.[5] ಈ ಶಾಸನವು ಚನ್ನಕೇಶವ ದೇವಸ್ಥಾನದ ಆವರಣದಲ್ಲಿ ಕಂಡುಬರುತ್ತದೆ. ಇದು ಕಪ್ಪೆಚೆನ್ನಿಗರಾಯ ಮತ್ತು ಚನ್ನಕೇಶವ ದೇವಾಲಯಗಳು ಮಾತ್ರ ಒಂದೇ ಆವರಣದಲ್ಲಿ ಉಳಿದಿವೆ. ಲಕ್ಷ್ಮೀನಾರಾಯಣ ದೇವಾಲಯ ಈಗ ಕಾಣ ಬರುವುದಿಲ್ಲ, ನಾಶವಾಗಿರಬಹುದು ಅಥವಾ ಉಳಿದಿರುವ ಎರಡು ದೇವಾಲಯಗಳಲ್ಲಿ ಲಕ್ಷ್ಮೀನಾರಾಯಣ ದೇವಾಲಯ ಉಳಿದುಕೊಂಡಿದ್ದು ಮತ್ತೊಂದು ದೇವಾಲಯ ನಾಶವಾಗಿರಬಹುದು ಅಥವಾ ದೇವಾಲಯಗಳ ಮೂರ್ತಿಗಳು ಅದಲು ಬದಲು ಆಗಿರಬಹುದು. ಕ್ರಿ.ಶ.1122–23ರ ತೆರಣ್ಯ ಶಾಸನವು ತ್ರುಟಿತವಾಗಿದ್ದು, ನಾರಣದೇವ ಎಂಬುವರು ವಿಷ್ಣು ಮಂದಿರವನ್ನು ಕಟ್ಟಿಸಿರುವ ಕುರಿತು ತಿಳಿದುಬರುತ್ತದೆ.[6]

ಆದರೆ, ಪ್ರಸ್ತುತ ಕಾಲಘಟ್ಟದಲ್ಲಿ ಈ ದೇವಾಲಯವು ಈಶ್ವರ ದೇವಾಲಯವಾಗಿದೆ. ಕ್ರಿ.ಶ.1123ರ ಕೆಲ ದತ್ತಿ ಶಾಸನವು ವಿವರಿಸುವಂತೆ ಹೊಯ್ಸಳ ದೊರೆ ವಿಷ್ಣುವರ್ಧನನು ಜನಾರ್ಧನ ದೇವರನ್ನು ಪ್ರತಿಷ್ಠಾಪಿಸಿ ಆ ದೇವರಿಗೆ 18 ವಿತ್ತಿಯೊಳಗೆ 2 ವಿತ್ತಿಯನ್ನು ಪೂಜಾ ವಿಧಿಗಾಗಿ ಅರ್ಚಕರ ನಿರ್ವಹಣೆಗಾಗಿ ದೇವಾಲಯದ ಸೇವಕರಿಗಾಗಿ ಧಾರಾಪೂರ್ವಕವಾಗಿ ದಾನ ನೀಡುತ್ತಾನೆ. ಈ ದಾನದ ವಿವರದಲ್ಲಿನ ಆಸಕ್ತಿದಾಯಕ ವಿಚಾರವೆಂದರೆ; ಜನಾರ್ಧನ ದೇವರಿಗೆ ನೀಡುವ ಕಾಣಿಕೆಯು ಆಯಾ ಕಾಲಘಟ್ಟದಲ್ಲಿ ಉದ್ಭವಿಸುವ ಬಲ ಅತಿವೃಷ್ಠಿ ಅಥವಾ ಬೆಳೆದ ಇಳುವರಿಯು ಉತ್ತಮವಾಗಿದ್ದರೆ ಮಾತ್ರ ಸಲ್ಲಿಸಬೇಕು ಎನ್ನುವಂತಹದ್ದು.[7] ಹಾಸನ ಜಿಲ್ಲೆಯ ಶಾಸನೋಕ್ತ ದಾಖಲೆಯ ಪ್ರಕಾರ ಸ್ವತಃ ವಿಷ್ಣುವರ್ಧನನೇ ನಿರ್ಮಿಸಿದ ಏಕೈಕ ವಿಷ್ಣು ದೇವಾಲಯವೇ ಈ ಜನಾರ್ಧನ ದೇವಾಲಯ ಎಂಬುದನ್ನು ಗಮನಿಸಬೇಕಾದ ವಿಷಯವಾಗಿದೆ. ಅಂದಿನ ಕಾಲದ ಜನಾರ್ಧನ ದೇವಾಲಯವು ಇಂದು ತಿರುಮಲ ದೇವರ ದೇವಾಲಯವಾಗಿ ಬದಲಾವಣೆಯಾಗಿದೆ.

ಕ್ರಿ.ಶ.1149ರ ಹೊನ್ನಾವರ ಶಾಸನವು ತಿಳಿಸುವಂತೆ ಹಲವು ಹತ್ತು ವಿಷ್ಣು ದೇವಾಲಯಗಳನ್ನು ಕಟ್ಟಿಸಿದ ಕೊನೆಯ ಶಂಕರದಂಡನಾಥನು ಹೊನ್ನಾವರ ಅಗ್ರಹಾರದಲ್ಲಿ ಕೇಶವ ದೇವಾಲಯವನ್ನು ನಿರ್ಮಿಸುತ್ತಾನೆ. ಅನಂತರ ಮಹಾ ಪ್ರಧಾನರಾದ ಹೆಗ್ಗಡೆ ಲಕುಮಯ್ಯನು ಈ ದೇವಾಲಯಕ್ಕೆ ಹಲವಾರು ದಾನಗಳನ್ನು ನೀಡುತ್ತಾನೆ. ಜೊತೆಗೆ ಶಂಕರದಂಡನಾಥನ ಮಗನಾದ ಬೋಕಣನಿಗೂ ಪರಿಚಾರಕ ಮಾಳೆಯನಿಗೂ ಅನೇಕ ದಾನಗಳನ್ನು ನೀಡುತ್ತಾನೆ.[8] 12ನೆಯ ಶತಮಾನದ ಅಣತಿ ಶಾಸನವು ಜನಾರ್ಧನ ಭಟ್ಟರು ನಾರಾಯಣ ದೇವಾಲಯವನ್ನು ಕಟ್ಟಿಸಿದರೆಂದು ಅಲ್ಲಿನ ಮಹಾಜನರ ಕೋರಿಕೆಯ ಮೇರೆಗೆ ವಿಷ್ಣುವರ್ಧನನು ದೇವಾಲಯದ ಜೀರ್ಣೋದ್ಧಾರಕ್ಕೆ ಹತ್ತು ಹೊನ್ನನ್ನು ದಾನವಾಗಿ ನೀಡಿದರೆಂದೂ ಶಾಸನ ಪಾಠದಿಂದ ತಿಳಿದುಬರುತ್ತದೆ.[9] ಬಹುಮುಖ್ಯವಾಗಿ ಹೊಯ್ಸಳ ವಿಷ್ಣುವರ್ಧನನು ಚೋಳರ ವಿಜಯದ ನೆನಪಿಗಾಗಿ ಬೇಲೂರಿನಲ್ಲಿ ವಿಜಯ ನಾರಾಯಣಸ್ವಾಮಿ ದೇವಾಲಯವನ್ನು ನಿರ್ಮಿಸಲಾಗಿದೆ.

ಕ್ರಿ.ಶ.1117ರಲ್ಲಿ ಚನ್ನಕೇಶವ ಅಥವಾ ವಿಜಯ ನಾರಾಯಣ ದೇವಾಲಯವು ಕೇಂದ್ರ ಭಾಗದಲ್ಲಿ ಸುತ್ತಲೂ ಎತ್ತರವಾದ ಪ್ರಾಕಾರ ಗೋಡೆಯನ್ನು ಹೊಂದಿರುವ 443 ಅಡಿ ಉದ್ದ 396 ಅಡಿ ಅಗಲ ಇರುವ ಪ್ರಾಂಗಣದ ಮಧ್ಯದಲ್ಲಿ ನಕ್ಷತ್ರಾಕಾರದ ತಲವಿನ್ಯಾಸದಲ್ಲಿ ಪೂರ್ವ ಪಶ್ಚಿಮ 178 ಅಡಿ ಉತ್ತರ ದಕ್ಷಿಣ 156 ಅಡಿ ವಿಸ್ತಾರದ ದೇವಾಲಯವನ್ನು ಮೂರು ಅಡಿ ಎತ್ತರದ ಜಗುಲಿಯ ಮೇಲೆ ಕಟ್ಟಲಾಗಿದೆ. ಈ ಜಗುಲಿಯ ದೇವಾಲಯದ ಹೊರ ಗೋಡೆಗಳ ಮೇಲಿನ ಶಿಲ್ಪ ವೈಭವವನ್ನು ನೋಡಲು ಅನುಕೂಲವಾಗಿದೆ.

ಬೇಲೂರಿನ ಚನ್ನಕೇಶವ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗುಡಿ, ಸುಕನಾಸಿ, ನವರಂಗ ಮತ್ತು ಪ್ರಾಕಾರವನ್ನು ಹೊಂದಿದೆ. ನವರಂಗಕ್ಕೆ ಪೂರ್ವ – ದಕ್ಷಿಣ ಮತ್ತು ಉತ್ತರ ಕಡೆಗಳಿಂದ ಪ್ರವೇಶ ದ್ವಾರಗಳಿವೆ. ದೇವಾಲಯದ ಮೂಲ ಗರ್ಭಗುಡಿಯಲ್ಲಿ ಚನ್ನಕೇಶವ ಮೂರ್ತಿ ಶಿಲ್ಪವು ತುಂಬಾನೇ ಸೊಗಸಾಗಿ ಮೂಡಿಬಂದಿದೆ. ಸುಮಾರು 6 ಅಡಿ ಎತ್ತರ ವಿರುವ ವಿಷ್ಣುವಿಗೆ ಅವತಾರದ ನಾಲ್ಕು ಕೈಗಳನ್ನು ಹೊಂದಿರುವ ಕೇಶವನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದ್ದು, ಶಂಖ, ಚಕ್ರ, ಗಧ ಮತ್ತು ಪದ್ಮವು ಸೇರಿದಂತೆ ಕಾಣಬರುತ್ತದೆ. ಇಲ್ಲಿಯೂ ಶಿಲ್ಪವು ಮಹಾವಿಷ್ಣುವಿನ 24 ಅವತಾರವಾದ ಮೋಹಿನಿ ರೂಪದಲ್ಲಿ ಇದೆ. ಆತನ ಸುತ್ತಲೂ ವಿಷ್ಣುವಿನ ಎಲ್ಲಾ ಅವತಾರಗಳು ಸುಂದರವಾದ ಶಿಲ್ಪಗಳನ್ನು ಕಡೆಯಲಾಗಿದೆ. ಚನ್ನಕೇಶವಸ್ವಾಮಿಯ ಇಕ್ಕೆಲಗಳಲ್ಲಿ ಚಿಕ್ಕ ಪ್ರಮಾಣದಲ್ಲಿ ಪ್ರಿಯತಮೆಯಾರಾದ ಶ್ರೀದೇವಿ ಮತ್ತು ಭೂದೇವಿಯರನ್ನು ಅವರ ಅಕ್ಕಪಕ್ಕಗಳಲ್ಲಿ ಚಾಮರಧಾರಿಣಿಯರನ್ನು ಸಹ ಸ್ಥಾಪಿಸಿದ್ದಾರೆ.

ಚನ್ನಕೇಶವಸ್ವಾಮಿ ಪಾರ್ಶ್ವಗಳಲ್ಲಿ ಚಾಮರಧಾರಿಣಿಯರನ್ನು ಸಹ ಸ್ಥಾಪಿಸಿದ್ದಾರೆ. ಚನ್ನಕೇಶವ ದೇವಾಲಯದ ನವರಂಗದ ಒಳ ಅಂಕಣದಲ್ಲಿ ಸುಮಾರು 42 ಕಂಬಗಳು ವಿಶಿಷ್ಟವಾದವುಗಳು. ಇವುಗಳು ತನ್ನದೇ ಆದ ಸೌಂದರ್ಯವನ್ನು ಹೊಂದಿದ್ದವು. ಒಂದು ಕಂಬದಂತೆ ಮತ್ತೊಂದು ಕಂಬವು ಇಲ್ಲದಿರುವುದು ಈ ದೇವಾಲಯದ ಮತ್ತೊಂದು ವೈಶಿಷ್ಟ್ಯವಾಗಿದೆ. ಈ ಕಂಬಗಳಲ್ಲಿ ನರಸಿಂಹ ಕಂಬ ಮತ್ತು ಮೋಹಿನಿ ಕಂಬಗಳು ತುಂಬಾನೇ ಅದ್ಭುತವಾಗಿ ಮೂಡಿಬಂದಿದೆ. ನರಸಿಂಹನ ಕಂಬದಲ್ಲಿ ಹಿರಣ್ಯಕಶ್ಯಪುನನ್ನು ಧಮನ ಮಾಡುವ ದೃಶ್ಯ ತುಂಬಾನೇ ಸೊಗಸಾಗಿ ಮೂಡಿಬಂದಿದೆ.

ದರ್ಪಣ ಸುಂದರಿ, ಶುಖಭಾಷಣಿ, ವಸಂತನ ನೃತ್ಯ, ಸಿದ್ಧಗೊಳಸುತ್ತಿರುವ ಸುಂದರ, ಕೋತಿಯ ಕುಪಿತ, ವೀರಾಯೋಜಿತ, ಕೇಶ ಶೃಂಗಾರ, ತ್ರಿಭಂಗಿ ನೃತ್ಯ, ಡೋಲು, ನೃತ್ಯ, ಮುರಳೀಧರ, ಸಂಗೀತಗಾರ್ತಿ, ನಾಟ್ಯ ಮೋಹಿನಿ, ಪಿಟೀಲು, ಗುಂಗುರು ಕೂದಲಿನ ಸುಂದರಿ, ಬೇಟೆಗಾರ್ತಿ, ವೀರ ಬೇಟೆಗಾರ್ತಿ, ಪುರುಷವೇಷ, ಸನ್ಯಾಸಿನಿ, ಶಿಲಾಬಾಲಿಕೆ, ಶಿವಜಲಂಧರ, ಪುತನಿ, ಮಹಾಬಲಿ ಸಹಿತ ವಾಮನ, ರಾವಣ ಕೈಲಾಸ ಪರ್ವತವನ್ನು ಎತ್ತುತ್ತಿರುವುದು, ಮಹಾಬಲಿ ಸಹಿತ ವಾಮನ, ರಾವಣ ಕೈಲಾಸ ಪರ್ವತವನ್ನು ಎತ್ತುತ್ತಿರುವುದು, ಚಾಮುಂಡಿ ಬ್ರಹ್ಮ, ಆಧುನಿಕ ಮಹಿಳೆ, ಅರ್ಜುನ ಬಿಲ್ಲು ಹೊಡೆಯುತ್ತಿರುವುದು, ನಾಟಕ ನಿಪುಣೆ, ಸಂಗೀತಲೋಲಿ, ನಾಟ್ಯ ಸುಂದರಿ, ಬೇಟೆಗಾರ್ತಿ, ಉತ್ತಮ ಬೇಟೆಗಾರ್ತಿ, ಸುಂದರ ನೃತ್ಯ, ಭಸ್ಮ ಮೋಹಿನಿ ನೃತ್ಯ, ಸುಂದರಿ ಚೇಳು ಗೋಡೆಯಲ್ಲಿ ಸುಂದರ ದೃಶ್ಯ, ಶಕುನ ಹುಡುಗಿ ವಿಶ್ರಾಂತಿ ಪಡೆಯುತ್ತಿರುವ ಸುಂದರಿ, ನಾಗವೀಣಾ ನೃತ್ಯ, ಭೂಷಣ ಪ್ರಿಯೆ, ಭವಿಷ್ಯದ ಹುಡುಗಿ, ಪಟದ ನೃತ್ಯಗಾರ್ತಿ, ಸುಂದರಿಯ ಕೇಶ, ಸರ್ವಾಲಂಕೃತ ಸುಂದರಿ, ಡೋಲು ಕುಣಿತ, ಆರ್ಚ್ ನೃತ್ಯಗಾರ್ತಿ, ಸುಂದರಿ ಮತ್ತು ಗಿಳಿ, ಶಾಂತಲಾ ದೇವಿ, ಗಂಧರ್ವ ನೃತ್ಯ, ಕೇಶ ಶೃಂಗಾರ

ಇನ್ನಿತರ ಉಬ್ಬು ಶಿಲ್ಪಗಳನ್ನು ಕಾಣಬಹುದಾಗಿದೆ. ನವರಂಗದಲ್ಲಿ ಅಂದು ಪೂರ್ವದ್ವಾರದ ಮೂಲಕ ಪ್ರವೇಶಿಸುತ್ತಿದ್ದಂತೆ, ರತಿಮನ್ಮಥರ ಶಿಲ್ಪಾಕೃತಿಗಳನ್ನು ಕಾಣಬಹುದು. ಈ ತರಹದ ಶಿಲ್ಪಾಕೃತಿಗಳು ಹೊಯ್ಸಳರ ದೇವಾಲಯಗಳಲ್ಲಿ ಕಾಣಬರುತ್ತದೆ. ಒಳಭಾಗದಲ್ಲಿ ಬಳೆಯಾಕಾರದಿಂದ ಅಲಂಕೃತವಾದ 48 ಕಂಬಗಳಲ್ಲಿ ನರಸಿಂಹ ಕಂಬವು ತಿರುಗಣಿಗಳ ಮೇಲಿಟ್ಟು ತಿರುಗಿಸಿ ಬೇಕಾದ ಚೆಲುವಿನ ಆಕೃತಿಗಳನ್ನು ರೂಪಿಸಬಹುದಾಗಿದೆ. ಮಧ್ಯದಲ್ಲಿ ನಾಲ್ಕು ನಾಲ್ಕು ಕಂಬಗಳು ನೋಡಲು ಒಂದೇ ರೀತಿಯಾಗಿದ್ದರೂ ಸಹ ಬೇರೆ ಬೇರೆ ಶಿಲಾಕೃತಿಗಳನ್ನು ಹೊಂದಿದ್ದು, ಅದರಲ್ಲಿ ಶಿಲಾಬಾಲಿಕೆಯರನ್ನು ಕೆತ್ತಿದ್ದಾರೆ. ಇಂದಿನ ಶಿಲ್ಪಗಳು ಚಿನ್ನದ ಬಳೆಗಳು ಮತ್ತು ಆಭರಣಗಳನ್ನು ತಯಾರಿಸುತ್ತಿರುವುದು, ಇದನ್ನು ಮಾದರಿಯಾಗಿ ಇಟ್ಟಿರಬಹುದೇನೋ ಎಂದು ಹೇಳಬಹುದಾಗಿದೆ.

ಬೇಲೂರಿನ ಚನ್ನಕೇಶವ ದೇವಾಲಯದಲ್ಲಿ ಅಂದು ಕೆಲಸ ಮಾಡಿರುವವರ ಪ್ರಮುಖರ ಹೆಸರುಗಳನ್ನು ಅಂದರೆ ಶಿಲ್ಪವನ್ನು ಕೆತ್ತಿದ ಶಿಲ್ಪಿಗಳ ಹೆಸರುಗಳನ್ನು ಆಯಾ ಶಿಲ್ಪಗಳ ಕೆಳಗೆ ಕೆತ್ತಲಾಗಿದೆ. ಅವುಗಳಲ್ಲಿ ಜಾಲಣ, ಭಂಡಾರಿ, ಚೀರಣ, ಕೇತೋಜ, ಚೋಚಣ ಎಂದು ತಿಳಿದುಬರುತ್ತದೆ. ಈ ದೇವಾಲಯ ಒಂದರಲ್ಲಿಯೇ ಸರಿಸುಮಾರು ಮೂರು ಸಾವಿರ ಶಿಲ್ಪಗಳಿರುವುದನ್ನು ಅಂದಾಜು ಮಾಡಲಾಗಿದೆ. ಆದ ಕಾರಣ ಚನ್ನಕೇಶವ ದೇವಾಲಯದ ಶಿಲ್ಪಕಲೆಯಲ್ಲಿ ಹೊಯ್ಸಳರ' ಕಾಲದ ಶ್ರೀಮಂತಿಕೆಯನ್ನು ಹೊಂದಿದೆ ಎಂದು ತಿಳಿಯಬಹುದು.

ಒಟ್ಟಾರೆಯಾಗಿ ಹೇಳುವುದಾದರೆ; ಕರ್ನಾಟಕದ ಇತಿಹಾಸದ ರಾಜ ಮನೆತನಗಳಲ್ಲಿ ಒಂದಾದ ಹೊಯ್ಸಳರ ವಂಶದ ವಿಷ್ಣುವರ್ಧನನು ಮೂಲತಃ ಜೈನನಾಗಿದ್ದು, ತದನಂತರದಲ್ಲಿ ಪರಿವರ್ತಿತಗೊಂಡು ತನ್ನ ಆಡಳಿತಾವಧಿಯಲ್ಲಿ ವೈಷ್ಣವ ದೇವಾಲಯಗಳನ್ನು ಕಟ್ಟಿಸುವುದರ ಮುಖಾಂತರ ವೈಷ್ಣವ ಧರ್ಮದ ಆರಾಧಕನು ಕೂಡ ಆಗಿದ್ದನೆಂದು ಈ ಲೇಖನವು ಆಧಾರಗಳ ಸಹಿತ ಪುಷ್ಠಿ ನೀಡಿ ತಿಳಿಸಿರುತ್ತದೆ ಎಂದೇ ಹೇಳಬಹುದು. ಇದೇ ಅಲ್ಲದೇ ಈತನು ಜೈನ ಮತ್ತು ಶೈವ ಧರ್ಮಕ್ಕೂ ಸಹ ಮಹತ್ತರವಾದ ಪಾತ್ರಗಳನ್ನು ವಹಿಸಿರುವುದು ಹೊಯ್ಸಳರ ಶಾಸನ ಮತ್ತು ವಾಸ್ತುಗಳ ಅಧ್ಯಯನದಿಂದ ಅಭಿವ್ಯಕ್ತವಾಗುತ್ತದೆ. ಆದ ಕಾರಣ ಹೊಯ್ಸಳರ ಕಾಲಕ್ಕೆ ವೈಷ್ಣವ ಸಂಸ್ಕೃತಿಯೊಂದಿಗೆ ಇನ್ನಿತರ ಸಂಸ್ಕೃತಿಗೆ ಪೂರಕವಾಗಿದ್ದಾರೆ. ಹೊಯ್ಸಳರ ಕಾಲದ ಧಾರ್ಮಿಕ ಭೂಮಿಕೆಯಲ್ಲಿ ವೈಷ್ಣವ ಸಂಸ್ಕೃತಿಗೆ ಪ್ರಮುಖ ಸ್ಥಾನವಿದ್ದು ಮೇಲುನೋಟಕ್ಕೆ ಇವರು ಕೇವಲ ವೈಷ್ಣವ ಸಂಸ್ಕೃತಿಯನ್ನು ಅನುಸರಿಸಿದವರೇನೋ ಎಂದು ಕಾಣುವಂತೆ ವೈಷ್ಣವ ದೇವಾಲಯಗಳು ಸಹ ಉಳಿದುಬಂದಿದೆ. ಆದರೆ, ಅಂದಿನ ಕಾಲದ ಸಂಕುಚಿತ ಮನಸ್ಸಿನ ಉಗ್ರ ಪಂಥೀಯ ಭಾವನೆಗಳನ್ನು ಬೆಳೆಸಿಕೊಳ್ಳದೆ ತಮ್ಮ ಸಮಾಜದಲ್ಲಿ ಸಮನ್ವಯದ ಸಿದ್ಧಾಂತವನ್ನು ಅನುಸರಿಸಿರುವುದು ವ್ಯಕ್ತವಾಗುತ್ತದೆ. ಒಟ್ಟಿನಲ್ಲಿ ವೈಷ್ಣವ ಸಂಸ್ಕೃತಿಯೂ ಹಾಸನ ಜಿಲ್ಲೆಯಲ್ಲಿ ಸಾಕಷ್ಟು ಕುರುಹುಗಳಾದ ವೈಷ್ಣವ ಶಿಲ್ಪಗಳು ಕಂಡುಬರುತ್ತದೆ. ಆದ

ಕಾರಣ ಬೇಲೂರಿನ ಚನ್ನಕೇಶವ ದೇವಾಲಯದಿಂದ ವಿಷ್ಣುವರ್ಧನನ ಕಾಲಕ್ಕೆ ಪ್ರಭಾವಶಾಲಿಯಾಗಿ ಮೆರೆದಿತ್ತೆಂದು ತಿಳಿಯಬಹುದಾಗಿದೆ.

ಹೊಯ್ಸಳರ ವಿಷ್ಣುವರ್ಧನನ ಕಾಲದ ಶಾಸನಗಳನ್ನು ಗಮನಿಸಿದರೆ; ಭಾರತದ ಇತರ ಶಾಸನಗಳ ಸಾಲಿನಲ್ಲಿಯೇ ಮುಂದುವರೆದು ಪರಂಪರಾನುಗತ ಮನೋಧರ್ಮವನ್ನೇ ಪ್ರತಿಫಲಿಸುತ್ತದೆ. ಹೊಯ್ಸಳರ ನಾಡಿನ ಹಾಗೂ ವಾಸ್ತುವಿನ ಪ್ರಕಾರ ಇವರ ಕಾಲದ ಶಾಸನಗಳು ನೀಡುವ ಮಾಹಿತಿಯನ್ನು ಮುಖ್ಯವಾಗಿ ಪರಿಗಣಿಸುವುದರೊಂದಿಗೆ ಧರ್ಮವನ್ನು ಸಹ ಬೆಳೆಸಿದ್ದಾನೆ ಎಂಬುದು ಮಾತ್ರ ಸತ್ಯ.[10]

ಒಟ್ಟಾರೆಯಾಗಿ, ಹೊಯ್ಸಳರ ಕಾಲದ ದೇವಾಲಯಗಳು ಸಮಾಜದ ಕೇಂದ್ರ ಬಿಂದುಗಳಾಗಿದ್ದು ಧಾರ್ಮಿಕ, ಸಾಮಾಜಿಕ ಮತ್ತುಕಲಾತ್ಮಕ ಚಟುವಟಿಕೆಗಳ ಕೇಂದ್ರಗಳೂ ಸಹ ಆಗಿದ್ದವು. ಸಮಾಜದ ಬೆಳವಣಿಗೆಯ ದೃಷ್ಟಿಯಲ್ಲಿ ಪಂಥೀಯ ಪೈಪೋಟಿಗಳು ತೆರೆಮರೆಯಲ್ಲಿ ಕಂಡುಬಂದವಾದರೂ, ಈ ಪೈಪೋಟಿಯು ಆರೋಗ್ಯಕರ ಚೌಕಟ್ಟಿನೊಳಗೆ ಮಾತ್ರ ಉಳಿದಿದ್ದು ಹೊಯ್ಸಳ ಕಾಲದಲ್ಲಿ ಕಂಡುಬರುತ್ತದೆ.

**ಕೊನೆ ಟಿಪ್ಪಣಿಗಳು**


1. ಎಫಿಗ್ರಾಫಿಯ ಕರ್ನಾಟಕ ಸಂಪುಟ – 9, ಬೇಲೂರು ತಾಲ್ಲೂಕು, ಶಾಸನ ಸಂಖ್ಯೆ–3.
2. ಎ.ಎಸ್.ನಂಜುಂಡಸ್ವಾಮಿ, ಹೊಯ್ಸಳರ ಇತಿಹಾಸ, ಕರ್ನಾಟಕ, ಇತಿಹಾಸ ಮಾಲಿಕೆ, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ, 1989, ಪು.ಸಂ.17.
3. ಎಫಿಗ್ರಾಫಿಯ ಕರ್ನಾಟಕ ಸಂಪುಟ – 9, ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು. ಶಾಸನ ಸಂಖ್ಯೆ–3.
4. ಡಾ.ಆರ್.ಗೋಪಾಲ್, ಹಾಸನ ಜಿಲ್ಲೆಯ, ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2010, ಪು.ಸಂ.216.
5. ಎಫಿಗ್ರಾಫಿಯ ಕರ್ನಾಟಕ ಸಂಪುಟ–9, ಬೇಲೂರು ತಾಲ್ಲೂಕು, ಶಾಸನ ಸಂಖ್ಯೆ–16.
6. ಅದೇ, ಸಂಪುಟ–8, ಹೊಳೇನರಸೀಪುರ ತಾಲ್ಲೂಕು, ಶಾಸನ ಸಂಖ್ಯೆ–89.
7. ಅದೇ, ಸಂಪುಟ–8, ಹಾಸನ ತಾಲ್ಲೂಕು, ಶಾಸನ ಸಂಖ್ಯೆ–76.
8. ಅದೇ, ಶಾಸನ ಸಂಖ್ಯೆ–95.
9. ಅದೇ, ಸಂಪುಟ–10, ಚನ್ನರಾಯಪಟ್ಟಣ ತಾಲ್ಲೂಕು, ಶಾಸನ ಸಂಖ್ಯೆ–79.
10. S.Settar, Hoysala Sculptures, Copenhagen, 1975.